<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ.42/2023</u>

| | | | |
|---|---|---|---|
| ಹೆಸರು | : | ಮುತ್ತುರಾಜು | ಸಿ .ಡಬ್ಲ್ಯೂ :8 |
| ತಂದೆ ಹೆಸರು | : | ಜಯಣ್ಣ | ಪಿ .ಡಬ್ಲ್ಯೂ :6 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | PSI Gudibande PS | |
| ವಾಸಸ್ಥಳ | : | Gudibande | |

ಸಾಕ್ಷಿಯನ್ನು ದಿಃ 05-05-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ದಿಃ 28-06-2022 ರಿಂದ 28-07-2023 ರವರೆಗೆ ಗುಬ್ಬಿ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿಃ 04-12-2022 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊ. ಸಂಖ್ಯೆ 278/2022 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ .

ದಿಃ 05-12-2022 ರಂದು ಕೃತ್ಯ ಸ್ಥಳದಲ್ಲಿ ಚಾಸಾ -1 ರವರು ತೋರಿಸಿದ ಸ್ಥಳದಲ್ಲಿ ಚಾಸಾ -5 ಮತ್ತು 6 ರವರ ಸಮಕ್ಷಮ ಬೆಳಗ್ಗೆ 8.30 ರಿಂದ 9.30 ರಅವಧಿಯಲ್ಲಿ ಸ್ಥಳ ಪಂಚನಾಮೆ ಕ್ರಮ ಕೈಗೊಂಡಿದ್ದೇನೆ . ಸ್ಥಳದಲ್ಲಿ ಚಾಸಾ -1 ರವರು ಹಾಜರುಪಡಿಸಿದ ಮು ಮಾ -1 ನ್ನು ವಶಕ್ಕೆ ಪಡೆದಿದ್ದೇನೆ .

ದಿಃ 09-12-2022 ರಂದು ಆರೋಪಿತರುಗಳ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೂಲಕ ಬಿಡುಗಡೆ ಮಾಡಿದ್ದೇನೆ .

ದಿಃ 10-12-2022 ರಂದು ಚಾಸಾ -2,3 ಮತ್ತು 6 ರವರ ಹೇಳಿಕೆ ಪಡೆದಿದ್ದೇನೆ . ಅದೇ ದಿನ ಚಾಸಾ -1 ರವರ ಗಾಯದ ಪ್ರಮಾಣ ಪತ್ರ ನೀಡುವಂತೆ ಕೋರಿ ಮನವಿ ಪತ್ರ ಸಲ್ಲಿಸಿ ಕೊಂಡಿದ್ದೇನೆ .

ದಿಃ 03-01-2023 ರಂದು ಗುಬ್ಬಿ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಚಾಸಾ -1 ರವರ ಗಾಯದ ಪ್ರಮಾಣ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ . ಆರೋಪಿತರುಗಳ ವಿರುದ್ಧ ಗುರುತರ ಆರೋಪಗಳು ಸಾಬೀತಾದ ಕಾರಣ ಅದೇ ದಿನ ಅವರುಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ .

ನಿಪಿ -1 ರಿಂದ 3 ರಲ್ಲಿ ಸಾಕ್ಷಿಯು ತಮ್ಮ ಸಹಿಗಳನ್ನು ಗುರುತಿಸಿದ್ದಾರೆ ಅವುಗಳನ್ನು ನಿಪಿ -1 (ಬಿ ) ಮತ್ತು 2 (ಸಿ) ಮತ್ತು 3 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮು ಮಾ -1 ನ್ನು ಆರೋಪಿತರುಗಳನ್ನು ನೋಡಿ ಗುರುತಿಸಿದ್ದಾರೆ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದ:</u>-

ಈ ಪ್ರಕರಣಕ್ಕೆ ಸಂಬಂಧಿಸಿ ನಿಟ್ಟೂರು ಗ್ರಾಮದ ಸರ್ವೆ ನಂ. 213 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಚಾಸಾ -1 ರವರಿಂದ ಪಡೆದುಕೊಂಡಿದ್ದೇನೆ . ಸದರಿ ಪಹಣಿ ಪತ್ರಿಕೆಯ ವಿವರಗಳ ಪ್ರಕಾರ ಸದರಿ ಸ್ವತ್ತು ಚಾಸಾ -1 ರವರ ಹೆಸರಿನಲ್ಲಿ ಇಲ್ಲ ಎಂದರೆ ಸರಿ . ಚಾಸಾ -1 ರವರ ಹೇಳಿಕೆಯನ್ನು ಠಾಣೆಯಲ್ಲಿ ಕುಳಿತು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ .ನಾನು ಯಾವುದೇ ಸ್ಥಳಕ್ಕೆ ಭೇಟಿ ನೀಡದೆ ಠಾಣೆಯಲ್ಲಿ ಕುಳಿತು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗೆ ಹಾಜರಾಗಬೇಕೆಂದು ಸಾಕ್ಷಿದಾರರಿಗೆ ನೋಟಿಸ್ ನೀಡಿದ್ದೇನೆ . ನಿಪಿ -2 ರ ಸಾಕ್ಷಿದಾರರಾದ ಚಾಸಾ -1 ರವರ ಸಂಬಂಧಿಕರು ಎಂದರೆ ಸರಿಯಲ್ಲ . ಮಹಜರು ಸಾಕ್ಷಿದಾರರು ನಿಟ್ಟೂರು ಗ್ರಾಮದವರಲ್ಲ ಮತ್ತು ಸರ್ವೆ ನಂ. 213 ರ ಸ್ವತ್ತಿನ ಬಾಜುದಾರರಲ್ಲ ಎಂದರೆ ಸಾಕ್ಷಿಯು ನಿಟ್ಟೂರು ಗ್ರಾಮದವರು ಮತ್ತು ಬೇರೆ ಗ್ರಾಮದವರು ಇದ್ದಾರೆ ಎಂದು ತಿಳಿಸಿದ್ದಾರೆ . ಚಾಸಾ -1 ರವರು ಪ್ರಕರಣಕ್ಕಾಗಿ ಮುಮಾ -1 ನ್ನು ಸೃಷ್ಟಿಸಿ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ . ಆರೋಪಿತರುಗಳು ನಿಪಿ -1 ರಲ್ಲಿ ತಿಳಿಸಿರುವಂತಹ ಯಾವುದೇ ಆರೋಪ ಮಾಡದೇ ಇದ್ದರೂ ಸಹಾ ಅವರುಗಳ ವಿರುದ್ದ ಸುಳ್ಳು ವಿವರಗಳ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

<u>ಮರುವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.